ನಂಬ್ರ : ಉಪುಸ (6) ಸಿಆರ್ 143/2009–10 ದಿನಾಂಕ : 11–02–2010

# ಉಳ್ಳಾಲ ಪುರಸಭೆ ದ.ಕ.

## ಮರು ಟೆಂಡರು ಪ್ರಕಟಣೆ

ಉಳ್ಳಾಲ ಪುರಸಭಾ ವ್ಯಾಪ್ತಿಯಲ್ಲಿ ಎಸ್.ಎಫ್.ಸಿ ಮುಕ್ತ ನಿಧಿ ಮತ್ತು ಪುರಸಭಾ ನಿಧಿಯಲ್ಲಿ ಈ ಕೆಳಗಿನ ಕಾಮಗಾರಿಗಳನ್ನು ನಿರ್ವಹಿಸಲು ಮೊಹರು ಮಾಡಿದ ಶೇಕಡಾವಾರು ಟೆಂಡರುಗಳನ್ನು ನಿಗದಿತ ನಮೂನೆಯಲ್ಲಿ ಮುಖ್ಯಾಧಿಕಾರಿ, ಉಳ್ಳಾಲ ಪುರಸಭೆ ಇವರು ಕರ್ನಾಟಕ ಪಾರದರ್ಶಕತೆ ಸಾರ್ವಜನಿಕ ಸಂಗ್ರಹಣೆ ಅಧಿನಿಯಮ 2000ರ ಅನ್ವಯ ಉಳ್ಳಾಲ ಪುರಸಭೆಯಲ್ಲಿ ನೋದಾಯಿತ ಪಿ.ಡಬ್ಲ್ಯೂ.ಡಿ ಗುತ್ತಿಗೆದಾರರಿಂದ ಸ್ಟಾಂಡರ್ಡ್ ಟೆಂಡರು ಡಾಕ್ಯುಮೆಂಟ್ KQ/K.G.S ಪ್ರಕಾರ ಟೆಂಢರು ಕರೆಯಲಾಗಿದೆ. ಕಾಮಗಾರಿಯ ಖಾಲಿ ಟೆಂಡರು ಫಾರ್ಮ್‌ಗೆ ಅರ್ಜಿ ನೀಡುವ ಮತ್ತು ಟೆಂಢರು ಫಾರ್ಮು ನೀಡುವ ಕೊನೆಯ ದಿನಾಂಕ : 15–03–2010, ಭರ್ತಿ ಮಾಡಿದ ಟೆಂಡರುಗಳನ್ನು ಸ್ವೀಕರಿಸಲು ನಿಗದಿಗೊಳಿಸಿದ ಕೊನೆಯ ದಿನಾಂಕ : 17–03–2010 ಅಪರಾಹ್ನ 4 ಗಂಟೆಯವರೆಗೆ ಮತ್ತು ಅನಿವಾರ್ಯ ಸಂದರ್ಭಗಳನ್ನು ಹೊರತುಪಡಿಸಿ ಬಂದ ಟೆಂಡರುಗಳನ್ನು ಅದೇ ದಿನ ತೆರೆಯಲಾಗುವುದು. ಇಲ್ಲದಿದ್ದಲ್ಲಿ ಟೆಂಡರು ತೆರೆಯುವ ಮುಂದಿನ ದಿನವನ್ನು ತಿಳಿಸಲಾಗುವುದು ಟೆಂಡರುಗಳನ್ನು ಸ್ವೀಕರಿಸುವುದು ಅಥವಾ ಅವಶ್ಯವೆಂದು ಕಂಡು ಬಂದಲ್ಲಿ ಯಾವುದೇ ಕಾರಣ ನೀಡದೆ ಟೆಂಡರು ಅವಧಿಯನ್ನು ಮುಂದೂಡುವ ಹಕ್ಕನ್ನು ಪುರಸಭೆ ಕಾದಿರಿಸಿಕೊಂಡಿದೆ. ಟೆಂಡರು ಶರ್ತಗಳನ್ನು ಮತ್ತು ಇತರ ಮಾಹಿತಿಗಳನ್ನು ರಜಾ ದಿನಗಳನ್ನು ಹೊರತು ಪಡಿಸಿ ಪುರಸಭಾ ಕಚೇರಿಯಲ್ಲಿ ಕಚೇರಿ ಸಮಯದಲ್ಲಿ ಪಡೆಯಬಹುದು.

| ಕ್ರ.ಸಂ | ಕಾಮಗಾರಿಯ ಹೆಸರು | ಟೆಂಡರಿಗಿಟ್ಟ ಮೊತ್ತ ಲಕ್ಷಗಳಲ್ಲಿ | ಇ.ಯಂ.ಡಿ ಮೊತ್ತ | ಟೆಂಡರು ಫಾರ್ಮು ಬೆಲೆ (ತೆರಿಗೆಗಳು ಸೇರಿ) | ಗುತ್ತಿಗೆದಾರರ ದರ್ಜೆ | ಕೆಲಸ ಪೂರ್ಣಗೊಳಿಸುವ ಅವಧಿ |
|---|---|---|---|---|---|---|
| **I** | **ಎಸ್.ಎಫ್.ಸಿ ಮುಕ್ತ ನಿಧಿ – 2009–2010** | | | | | |
| 1 | 6(6) ಉಳ್ಳಾಲ ಪುರಸಭಾ ಕಚೇರಿಗೆ ಐ.ಎಸ್.ಒ/ಐ.ಎಸ್.ಐ ಗುಣ ಮಟ್ಟದ ಲಿಫ್ಟ್ ವ್ಯವಸ್ಥೆ ಒದಗಿಸುವುದು. (ಕೊಟೇಶನ್) (ಗ್ರೌಂಡ್ ಫ್ಲೋರ್ +3) (3ನೇ ಕರೆ) | – | 20000.00 | 200.00 | ಲಿಫ್ಟ್ ತಯಾರಿಸುವ ಕಂಪೆನಿ/ಅಧಿಕೃತ ಮಾರಾಟಗಾರರು ಕಾಲ/3ನೇ ದರ್ಜೆ ಮತ್ತು | 60 ದಿನಗಳು |

## ಶರ್ತಗಳು

1 ಪುರಸಭೆ ಕಛೇರಿಯಲ್ಲಿ ನೊಂದಾಯಿಸಲ್ಪಟ್ಟ ಪಿಡಬ್ಲ್ಯೂಡಿ/ವಿದ್ಯುತ್ ಗುತ್ತಿಗೆದಾರರು ಮಾತ್ರ ಟೆಂಡರಲ್ಲಿ ಭಾಗವಹಿಸತಕ್ಕದ್ದು.

2 ಗುತ್ತಿಗೆದಾರರ ಟೆಂಡರು ಅಂಗೀಕೃತ ಪತ್ರವನ್ನು ಸ್ವೀಕರಿಸಿದ 20 ದಿನಗಳ ಒಳಗೆ ಗುತ್ತಿಗೆ ಕರಾರು ಪತ್ರದ ಶೇ 5 ರಷ್ಟು ಹಣವನ್ನು ಮುಖ್ಯಾಧಿಕಾರಿ ಉಳ್ಳಾಲ ಪುರಸಭೆ ಇವರ ಹೆಸರಿಗೆ ಭದ್ರತಾ ಠೇವಣಿಯಾಗಿ (Performance Security) ಪಾವತಿಸತಕ್ಕದ್ದು.

3 ಗುತ್ತಿಗೆದಾರರು ಟೆಂಡರು ಫಾರ್ಮು ಬೆಲೆಗಳನ್ನು ಮುಖ್ಯಾಧಿಕಾರಿ ಉಳ್ಳಾಲ ಪುರಸಭೆ ಇವರಿಗೆ ನಗದು ಯಾ ಡಿಡಿ ರೂಪದಲ್ಲಿ ಅರ್ಜಿಯ ಜೊತೆಯಲ್ಲಿ ಪಾವತಿಸತಕ್ಕದ್ದು. ಅರ್ಜಿಯ ಜೊತೆಯಲ್ಲಿ ಗುತ್ತಿಗೆದಾರರು ನೋಂದಣಿ ಪುಸ್ತಕದ ಕಾಮಗಾರಿಯ ವಿವರಗಳ ಪ್ರತಿಯನ್ನು ಹಾಗೂ

4 (ಲಕೋಟೆ 1) ಇಎಂಡಿ ಮೊತ್ತವನ್ನು ಷೆಡ್ಯೂಲ್ / ರಾಷ್ಟ್ರೀಕೃತ ಬ್ಯಾಂಕ್‌ಗಳ ಡಿ.ಡಿ, ಬ್ಯಾಂಕ್ ಗ್ಯಾರಂಟಿ, ಬ್ಯಾಂಕರ್ಸ್ ಚೆಕ್ ಅಥವಾ ನಗದು ರೂಪದಲ್ಲಿ ಮುಖ್ಯಾಧಿಕಾರಿ ಉಳ್ಳಾಲ ಪುರಸಭೆ ಇವರ ಹೆಸರಿಗೆ ಪಾವತಿಸತಕ್ಕದ್ದು.

5 ಕಾಮಗಾರಿಗೆ ಅವಶ್ಯವಿರುವ ಸಾಮಾಗ್ರಿಗಳಾದ ಉಕ್ಕು, ಸಿಮೆಂಟ್ ಇತ್ಯಾದಿ ಸಾಮಾಗ್ರಿಗಳನ್ನು ಗುಣ ನಿಯಂತ್ರಣ ಅಧಿಕಾರಿಗಳಿಂದ ಗುಣಮಟ್ಟದ ಬಗ್ಗೆ ದೃಡೀಕರಣ ಪತ್ರ ಸಲ್ಲಿಸತಕ್ಕದ್ದು. ಪುರಸಭೆಯಿಂದ ಯಾವುದೇ ಸಾಮಾಗ್ರಿಗಳನ್ನು ಸರಬರಾಜು ಮಾಡಲಾಗುವುದಿಲ್ಲ.

6 ನಿಬಂಧನೆಗೊಳಪಟ್ಟ ಟೆಂಡರ್‌ಗಳನ್ನು ಸ್ವೀಕರಿಸಲಾಗುವುದಿಲ್ಲ.

7 ಕಾರ್ಮಿಕ ಕಲ್ಯಾಣ ನಿಧಿಗಾಗಿ ಗುತ್ತಿಗೆದಾರರ ಬಿಲ್ ಮೊತ್ತದಲ್ಲಿ ಶೇ.1 ರಷ್ಟು ಕಡಿತಗೊಳಿಸಲಾಗುವುದು.

8 ಕಾಮಗಾರಿಗೆ Standard Tender Document ಅನ್ವಯ ಟೆಂಡರ್ ಕರೆಯಲಾಗುತ್ತಿದ್ದು ಹೆಚ್ಚಿನ ವಿವರಗಳಿಗೆ ಗುತ್ತಿಗೆದಾರರು ಮುಂಚಿತವಾಗಿ ಈ ಕಚೇರಿಗೆ ಬಂದು ಪಡೆಯತಕ್ಕದ್ದು.

9 (ಲಕೋಟೆ 1) ಕಾಮಗಾರಿಗೆ ಅವಶ್ಯವಿರುವ ಯಂತ್ರೋಪಕರಣಗಳ ಪೈಕಿ ಕನಿಷ್ಠ ಶೇ 50 ಸ್ವಂತ ಮಾಲಕತ್ವದ ಬಗ್ಗೆ ಮತ್ತು ಉಳಿದ ಯಂತ್ರೋಪಕರಣಗಳು ಬಾಡಿಗೆ ಪಡೆಯುವ ಬಗ್ಗೆ ದಾಖಲೆಗಳನ್ನು ಸಲ್ಲಿಸತಕ್ಕದ್ದು.

10 ಟೆಂಡರು ಸ್ವೀಕರಿಸುವ ನಿರಾಕರಿಸುವ ಅಥವಾ ಅವಶ್ಯವೆಂದು ಕಂಡು ಬಂದ್ದಲ್ಲಿ ಯಾವುದೇ ಕಾರಣ ನೀಡದೇ ಟೆಂಡರ್ ಅವಧಿಯನ್ನು ಮುಂದೂಡುವ ಹಕ್ಕನ್ನು ಮುಖ್ಯಾಧಿಕಾರಿ ಉಳ್ಳಾಲ ಪುರಸಭೆ ಇವರು ಕಾಯ್ದಿರಿಸಿಕೊಂಡಿರುತ್ತಾರೆ.

11 ಟೆಂಡರು ದಾಸ್ತಾವೇಜಿನಲ್ಲಿ ಯಾವುದೇ ಮುದ್ರಣ ದೋಷವಿದ್ದಲ್ಲಿ ಯಾವುದೇ ಕ್ಲೇಮನ್ನು ಪಡೆಯಲು ಅಧಿಕಾರವಿರುವುದಿಲ್ಲ.

12 ಸದ್ರಿ ಟೆಂಡರುಗಳಲ್ಲಿ ಸಮಕ್ಷಮ ಪ್ರಾಧಿಕಾರದ ತೀರ್ಮಾನ ಅಂತಿಮವಾಗಿರುತ್ತದೆ.

13 ಸಿಂಗಲ್ ಟೆಂಡರ್ ಬಂದಲ್ಲಿ ಪಾರದರ್ಶಕ ನಿಯಮಗಳಂತೆ ಕ್ರಮ ಕೈಗೊಳ್ಳಲಾಗುವುದು.

**ಅಧ್ಯಕ್ಷರು**
**ಉಳ್ಳಾಲ ಪುರಸಭೆ, ದ.ಕ.**

**ಮುಖ್ಯಾಧಿಕಾರಿ**
**ಉಳ್ಳಾಲ ಪುರಸಭೆ, ದ.ಕ.**